ಮಾರಿ ಹೊಟ್ಟೆಹೊರೆಯುವ ದುಷ್ಟನಲ್ಲವೇನೋ ಎನ್ನುವ ಭಾವ ನಿಧಾನವಾಗಿ ಸತ್ಯವೆನ್ನುವ ಖಾತ್ರಿಯಲ್ಲಿ ನಿರಾಳತೆ ಮತ್ತು ಕಸಿವಿಸಿ ಎರಡನ್ನೂ ಅನುಭವಿಸುತ್ತಾನೆ. ಈ ಸತ್ಯಾವಲೋಕನದ ಪ್ರಕ್ರಿಯೆ ಅವನಲ್ಲಿ ಇನ್ನೂ ಮುಂದುವರಿಯುತ್ತದೆ ಎನ್ನುವ ಖಾತ್ರಿ ಓದುಗರಲ್ಲೂ ಮೂಡುವಷ್ಟು ಕತೆ ಶಕ್ತಿಶಾಲಿಯಾಗಿದೆ. ಅದು ಅವನ ಆತ್ಮಾವಲೋಕನವೂ ಆಗುತ್ತದೆಯೇನೋ ಎನ್ನಿಸಿಬಿಡುತ್ತದೆ.

ಎರಡೂವರೆ ಪುಟಗಳ ವೈಕಂ ಮಹಮದ್ ಬಷೀರ್ ಅವರ ಕತೆಯೊಂದಿದೆ. 'ಸಿಹಿ ಮಾವಿನ ಮರ' ಎನ್ನುವ ಈ ಕತೆ ಸರಳಾತಿ ಸರಳತೆಯಲ್ಲಿಯೇ ಮಾನವದಯಾಮೃತವನ್ನು ಒಸರುತ್ತದೆ. ಮಾನವೀಯತೆಯಲ್ಲಿನ ನಮ್ಮ ನಂಬಿಕೆಯನ್ನು ಚಿಗುರಿಸುತ್ತದೆ. ಮನುಷ್ಯನೊಳಗಿನ ಜೀವಪ್ರೀತಿಯನ್ನು ಯಾವ ಘೋಷಣೆಗಳ ಹಂಗಿಲ್ಲದೆ, ಠೇಂಕಾರವಿಲ್ಲದೆ, 'ಇದು ಬಾಳು ನೋಡು' ಎನ್ನುವ ಆರ್ತತೆಯಲ್ಲಿ ಚಿತ್ರಿಸುತ್ತದೆ. ತುಸು ಹದ ತಪ್ಪಿದರೂ ಉಪದೇಶಾತ್ಮಕವಾದ, ಸೋಗಿನ ಕತೆಗಳಾಗಬಹುದಾದ ಈ ಕತೆಗಳು ತಮ್ಮ ಪ್ರಾಂಜಲವಾದ, ತೀವ್ರವಾದ ಮಾನವ ಸ್ಪರ್ಶದಿಂದಲೇ ತಾವು ಸಾಧಿಸಬಹುದಾದದ್ದನ್ನು ಸಾಧಿಸಿಬಿಡುತ್ತವೆ.

ಇ. ಹರಿಕುಮಾರ್ ಅವರ 'ಹೆಂಚು ಹಾಕಿದ ಪುಟ್ಟ ಮನೆ' ಕತೆ ನಮ್ಮನ್ನು ಓದುತ್ತಲೇ ಆವರಿಸಿಬಿಡುತ್ತದೆ. ಮನುಷ್ಯನ ಅಸಹಾಯಕತೆ, ಆಳದ ನೋವು, ಪರಿಹಾರವೇ ಇಲ್ಲವೇನೋ ಎನ್ನುವಂತೆ ಭಾಸವಾಗುವ ಸಂದರ್ಭಗಳಲ್ಲಿ ಮನುಷ್ಯ ಕಾಣುವ ಬಗೆಗೂ, ಸತ್ಯಕ್ಕೂ ಇರುವ ವ್ಯತ್ಯಾಸ ದಿಗ್ಭ್ರಮೆಯನ್ನೂ ವಿಷಾದವನ್ನೂ ಹುಟ್ಟಿಸುತ್ತದೆ. ರೇಣುಕಾ ಎನ್ನುವ ಮಹಿಳೆ, ಅವಳ ವ್ಯಕ್ತಿತ್ವಕ್ಕೂ ಅವಳ ಬದುಕಿಗೂ ಅರ್ಥಾತ್ ಸಂಬಂಧವೇ ಇಲ್ಲವೇನೋ ಎನ್ನುವಂತಿದ್ದಾಳೆ. ಯಾವುದೋ ಸಂದರ್ಭದಲ್ಲಿ ರೇಣುಕಾ ಮನೆಗೆ ಅಪಾರ ಕುತೂಹಲದಲ್ಲಿ ಕತೆಯ ನಿರೂಪಕ ಹೋದರೆ, ಆಘಾತಕಾರಿಯೆನ್ನುವಂತೆ ಊಹಿಸಲಸಾಧ್ಯವಾದ ಗಲೀಜು ಮತ್ತು ಅವ್ಯವಸ್ಥೆಯ ಆ ಮನೆಯನ್ನು ನೋಡಿ, ಅದಕ್ಕೆ ತರ್ಕ ಸಂಬಂಧವೇ ಇರದಿದ್ದುದನ್ನು ನೋಡಿ ಯಾಕೆ ಹೀಗೆ ಎನ್ನುವ ಪ್ರಶ್ನೆ ಕಾಡುತ್ತದೆ. ಎಂಥ ಸನ್ನಿವೇಶವೇ ಇರಲಿ ಮನೆಯನ್ನು ಇಷ್ಟು ಅಸ್ತವ್ಯಸ್ತವಾಗಿ ಇಟ್ಟುಕೊಳ್ಳಲು ಸಾಧ್ಯವೆ, ಮನೆಯ ಅಕ್ವೇರಿಯಂ, ಮಂಚದ ಮೇಲಿನ ಹರಿದ ಬೆಡ್‌ಶೀಟ್, ಕೊನೆಗೆ ಮನೆಗೆ ಬಂದ ಮಗನೂ ಅಷ್ಟೇ ಗಲೀಜಾದ ಬಟ್ಟೆ ಹಾಕಿಕೊಂಡಿರುತ್ತಾನೆ. ಇದೊಂದು ಯಕ್ಷಪ್ರಶ್ನೆ ಎಂದು ಅವನು ಅಂದುಕೊಳ್ಳುವ ಹೊತ್ತಿಗೆ, ಇನ್ನೊಮ್ಮೆ ಅವಳನ್ನು ಭೇಟಿಯಾಗುವ ಸಂದರ್ಭ ಬಂದಾಗ ಅವಳ ಬದುಕಿನ ಕತೆ ಇವನಿಗೆ ತಿಳಿಯುತ್ತದೆ. ಬೇಜವಾಬ್ದಾರಿ, ಕುಡುಕ, ಅಂಗವಿಕಲ ಗಂಡನ ಜೊತೆಯಲ್ಲಿ ಬಾಳುವ ಬದುಕು ಬದುಕೇ ಅಲ್ಲ ಎನ್ನುವ ಮನಃಸ್ಥಿತಿಯಲ್ಲಿ ಇರುವವಳಿಗೆ ಮನೆಯನ್ನೋ ಮಗನನ್ನೋ ಯಾಕೆ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದು ಸಹಜವಾಗಿಯೇ ಅನ್ನಿಸಿ, ಲೋಕದ ಅನಾಸಕ್ತಿಯೇ ಮೈವೆತ್ತಂತೆ ಇರುತ್ತಾಳೆ. ಮನೆಯಿಂದ ಹೊರಗೆ ಗೆಲುವಾಗಿ ಲವಲವಿಕೆಯಲ್ಲಿ ಇರುವ ರೇಣುಕಾಗೂ, ಮನೆಯನ್ನು ತಿಪ್ಪೆಯಾಗಿಸಿಕೊಂಡು ಅದರಲ್ಲಿ ನಿರ್ಜೀವವಾಗಿ ಬದುಕುವ ರೇಣುಕಾಗೂ ಯಾವ ಸಂಬಂಧವೂ ಇಲ್ಲ. ಕತೆಯ ಕೊನೆ ಮಾತ್ರ ನಾಟಕೀಯವಾಗಿರುವಂತೆಯೇ ಆರ್ದ್ರವಾಗಿಯೂ ಇದೆ. 'ಬಲಿಷ್ಠ ತೋಳುಗಳ ಅಪ್ಪುಗೆ ಹೇಗಿರಬಹುದು ಎನ್ನುವುದೇ ಗೊತ್ತಿಲ್ಲ ನನಗೆ, ಒಮ್ಮೆ ನನ್ನನ್ನು ಅಪ್ಪಿಕೊಳ್ಳುತ್ತೀರಾ' ಎಂದು ಗೆಳತಿಯ ಗಂಡನನ್ನು ಕೇಳುವ ರೇಣುಕಾ ಆ ತನಕ ನಾವು ನೋಡಿದ ಹೆಣ್ಣಿಗಿಂತ ಬಲು ಭಿನ್ನವಾಗಿ ಕಾಣುತ್ತಾಳೆ. ಗಳಿಗೆಯ ಅಪ್ಪುಗೆಯಿಂದ ತೃಪ್ತಳಾಗಿ ಹೊರಹೋಗುವ ರೇಣುಕಾಳನ್ನು ತಡೆದು ನಿತಾಂತವಾದ ಜೀವಪ್ರೀತಿಯಲ್ಲಿ ಅವಳನ್ನು ನಾವೂ ತಬ್ಬಿಬಿಡಬೇಕೆಂದು ಅಯಾಚಿತವಾಗಿ ಆಸೆಯಾಗುತ್ತದೆ. ಇದು ಬದುಕಿನ ಅನೂಹ್ಯ ನಡೆಯೆ? ದುರಂತವೆ? ಅಸಹಾಯಕತೆಯೆ? ಯಾವುದಿದ್ದೀತು? ಮನುಷ್ಯರ ಒಳಗು, ಅದರಲ್ಲಿ ಆಳವೇ ತಿಳಿಯದಂತೆ ತುಂಬಿರುವ ನೋವಿನ ಪಾತ್ರೆಯೇನೋ ಎನ್ನುವುದು ಮಾತ್ರವಲ್ಲ, ಓದುಗರನ್ನೂ ಅಷ್ಟೇ ತೀವ್ರವಾದ